ಸಿ.ಡಬ್ಲ್ಯೂ– 1

**ಪಿ.ಡಬ್ಲ್ಯೂ– 1**

ದಿನಾಂಕಃ 17-02-2026 ರಂದು ಸಾಕ್ಷಿಯನ್ನು ಕರೆಯಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಕೆ. ಬಿ. ಬಿ. ವಕೀಲರಿಂದಃ</u>**

ಮನೆ ಬಳಕೆಗಾಗಿ ಸಾಲ ಪಡೆದುಕೊಂಡಿರುತ್ತೇನೆ. ಬ್ಯಾಂಕಿಗೆ ಸಲ್ಲಿಸಿದ ಕಾಗದ ಪತ್ರಗಳನ್ನು ಓದಿರುವುದಿಲ್ಲ, ಓದಲು ಅವರು ಕೊಡಲಿಲ್ಲ. ಸಾಲ ಮರು ಪಾವತಿ ಮಾಡದ ಕಾರಣ ಸಾಲ ವಸೂಲಾತಿಗಾಗಿ ಅಸಲು ದಾವಾ ನಂಃ 134/2020 ರಂತೆ ಹಿರೇಕೆರೂರಿನ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ನನ್ನ ವಿರುದ್ಧ ದಾವೆ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ಲೋಕ ಆದಾಲತ್ ನಲ್ಲಿ ಇತ್ಯರ್ಥಪಡಿಸಿಕೊಂಡು ರಾಜೀ ಆಗಿರುತ್ತೇನೆ ಎಂದರೆ ರಾಜೀ ಆಗಿರುವುದಿಲ್ಲ. ಸಾಕ್ಷಿದಾರರು ಅಸಲು ದಾವಾ ನಂಃ 134/2020 ರ ಆದೇಶ ಪುಟ ಹಾಗೂ ಇತರ ದಾಖಲೆಗಳ ದೃಢೀಕೃತ ನಕಲುಗಳನ್ನು ತೋರಿಸಲಾಗಿ ಅವರು ಅದನ್ನು ನೋಡಿ ಗುರುತಿಸಲಾಗಿ ಸದರಿ ದಾಖಲೆಗಳನ್ನು ಒಟ್ಟಾಗಿ **ನಿಡಿ-1** ಎಂದು ಗುರುತಿಸಲಾಯಿತು.

2. ಹಳ್ಳಿಕೆರಿ ಇಂಡಸ್ಟ್ರಿಸ್ ದಾವಣಗೆರೆ ಇವರಲ್ಲಿ ಅಗರಬತ್ತಿ ಮಷಿನನ್ನು ಖರೀದಿಸಲು ನಾನು, ಚಾಸಾ-6, 7, 9, 10, 12, 13 ರವರು ದಿಃ 12-05-2017 ರಂದು ಕೆ.ವಿ.ಜಿ. ಬ್ಯಾಂಕನಲ್ಲಿ ರೂ.2,00,000/- ಪಡೆದುಕೊಂಡಿರುತ್ತೇವೆ ಎಂದರೆ ಅವರೇ ನಮ್ಮ ಖಾತೆಗೆ ಹಾಕಿರುತ್ತಾರೆ. ಅವರೇ ಡ್ರಾ ಮಾಡಿರುತ್ತಾರೆ. ನಮಗೆ ಏನು ಗೊತ್ತಿಲ್ಲ. ನನ್ನ ಎಸ್. ಬಿ. ಖಾತೆ ನಂಃ 89085106836 ಕ್ಕೆ ರೂ.2,00,000/- ಜಮಾ ಆಗಿರುತ್ತದೆ ಎಂದರೆ 1 ನೇ ಆರೋಪಿಯು ನಮ್ಮನ್ನು ಕರೆದು ಜಮಾ ಆಗಿರುತ್ತದೆ ಎಂದು ಹೇಳಿರುತ್ತಾರೆ. ಅದೇ ದಿನ ಸದರಿ ಹಣ ನನ್ನ ಸಾಲದ ಖಾತೆಗೆ ಜಮಾ ಆಗಿ ಹಳ್ಳಿಕೆರಿ ಇಂಡಸ್ಟ್ರಿಸ್ ದಾವಣಗೆರೆಗೆ RTGS ಮೂಲಕ ವರ್ಗಾವಣೆಯಾಗಿರುತ್ತದೆ ಎಂದರೆ 1 ನೇ ಆರೋಪಿಯು ನನಗೆ ಹೇಳಿರುತ್ತಾರೆ. ಸದರಿ ಹಣ ಕೆ.ವಿ.ಜಿ. ಬ್ಯಾಂಕ ತಡಕನಹಳ್ಳಿ ಶಾಖೆಯಲ್ಲಿ ಡ್ರಾ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

3. ಇನ್ನೂಳಿದ 10 ಜನ ಅದೇ ದಿನಾಂಕಿಗೆ ಭವಾನಿ ಸೇಲ್ಸ ಹಾವೇರಿ ಇವರಲ್ಲಿ ಅಗರಬತ್ತಿ ಮಷಿನನ್ನು ಖರೀದಿಸಲು ಕೆ.ವಿ.ಜಿ. ಬ್ಯಾಂಕನಲ್ಲಿ ರೂ.2,00,000/- ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಿಪಿ-1 ರ ದೂರಿನಲ್ಲಿ ನಾನು ಸೇರಿದಂತೆ ಒಟ್ಟು 18 ಜನ ಸಾಲ ಪಡೆದುಕೊಳ್ಳಲು

ಅರ್ಜಿ ಸಲ್ಲಿಸಿದ್ದೇವು ಎಂದು ತಿಳಿಸಿದ್ದು, ಆದರೆ ನಾವು ಒಟ್ಟು 17 ಜನ ಮಾತ್ರ ಸಾಲ ಪಡೆದುಕೊಳ್ಳಲು ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿಯಲ್ಲ. ಚಾಸಾ-11 ರವರು ನಮ್ಮ ಜೊತೆಗೆ ಸಾಲ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಒಂದೇ ಮಷಿನನ್ನು ಖರೀದಿಸಿ 17 ಜನ ಹಿಂದೆ-ಮುಂದೆ-ಪಕ್ಕಕ್ಕೆ ಹಾಗೂ ಬೇರೆ ಬೇರೆ ಸ್ಥಳಗಳಲ್ಲಿ ನಿಂತು ಫೋಟೋ ತೆಗೆಸಿಕೊಂಡು ಬ್ಯಾಂಕಿಗೆ ಸಲ್ಲಿಸಿ ಮೋಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಹಾಗೂ 1 ನೇ ಆರೋಪಿ ಶಾಮೀಲಾಗಿ ಬ್ಯಾಂಕಿಗೆ ಮೋಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅಗರಬತ್ತಿ ಮಷಿನ್ ಖರೀದಿ ಮಾಡಲಿಕ್ಕೆ ಮಾತ್ರ ನಮಗೆ ಲೋನ್ ನೀಡಲಾಗಿತ್ತು ಎಂದರೆ ಸರಿ. ಈ ವ್ಯವಹಾರದಲ್ಲಿ 2 ನೇ ಆರೋಪಿಯ ಯಾವುದೇ ಪಾತ್ರ ಇರುವುದಿಲ್ಲ ಎಂದರೆ ಸರಿಯಲ್ಲ. ಅವರು ತಮ್ಮ ಕರ್ತವ್ಯವನ್ನು ಪ್ರಾಮಾಣೀಕವಾಗಿ ನಿರ್ವಹಿಸಿದ್ದಾರೆ ಎಂದರೆ ಸರಿಯಲ್ಲ.

4. 2 ನೇ ಆರೋಪಿಯು ಸಾಲದ ದಾಖಲೆಗಳಿಗೆ ಬ್ಯಾಂಕಿನಲ್ಲಿಯೇ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಚೆಕ್ಕಿಗೂ ಬ್ಯಾಂಕಿನಲ್ಲಿ ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. 2 ನೇ ಆರೋಪಿಯು ಯಾವುದೇ ಚೆಕ್ಕಿಗೆ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಚೆಕ್ಕ ಬುಕ್ಕನ್ನು ಬ್ಯಾಂಕಿನಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. 2 ನೇ ಆರೋಪಿಯ ವಿರುದ್ಧ ಸುಳ್ಳು ದೂರು ದಾಖಲಿಸಿ ಅವರಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1, 3, 4, 6 ಮತ್ತು 7 ನೇ ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು**.

**ಮರು ವಿಚಾರಣೆಃ ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 17-02-2026 ಸಹಿ/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,

ಹಿರೇಕೆರೂರು